ಮುಂದುವರೆದಿತ್ತು. ಎಪ್ಪತ್ತೈದು ಅಡಿಗಳಾಗಿದ್ದಾಗ ಗಂಗಾಮಾತೆ ಪ್ರತ್ಯಕ್ಷಳಾಗಬೇಕೆ? ಎಲ್ಲರ ಮುಖಗಳಲ್ಲಿ ಫಕ್ಕನೇ ಜೀವಕಳೆಯ ಮಿಂಚಿನ ಸೆಳಕು. ಭೂಕೊರೆತ ಕೆಳಗಿಳಿದಂತೆ ನೀರಿನ ಸೆಳವು ಹೆಚ್ಚಾಗಿತ್ತು. ಎರಡು ನೂರು ಅಡಿಗಳಾಗುವಷ್ಟರಲ್ಲಿ ಮೂರು ಇಂಚು ನೀರು ಬಂದಿತ್ತು. ಅನಿಕೇತ್ ಖುಷಿಯಿಂದ ಚಿಕ್ಕ ಮಕ್ಕಳಂತೆ ಕುಣಿದಾಡಿ ಸಂಭ್ರಮಿಸಿದ್ದ. ತನಗಾಗಿದ್ದ ಅಪರಿಮಿತ ಖುಷಿಯನ್ನು ಅಲ್ಲಿದ್ದವರೆಲ್ಲರೊಂದಿಗೆ ಹಂಚಿಕೊಂಡಿದ್ದ. ಅವನ ತಂದೆತಾಯಿಗಳ ಸಂತೋಷಕ್ಕೂ ಪಾರವೇ ಇರಲಿಲ್ಲ.

ಮರುದಿನ ಬೆಳಿಗ್ಗೆಯಿಂದ ಪುನಃ ಬೋರ್ ಗಾಡಿ ಘರ್ರೆನ್ನತೊಡಗಿತ್ತು. ಅನಿಕೇತ್ ಮುಟ್ಟಿದ್ದೆಲ್ಲಾ ಚಿನ್ನ ಎನ್ನುವಂತೆ ಆ ದಿನ ಕೊರೆದ ಮೂರು ಕೊಳವೆ ಬಾವಿಗಳಲ್ಲಿ ಮೂರು, ಎರಡೂವರೆ, ಎರಡು ಇಂಚು ನೀರು ಸಿಕ್ಕಿತ್ತು. 'ಈ ಹುಡುಗ ನೌಕರಿ ತೊರೆದು ಇದ್ದಬದ್ದ ಹಣವನ್ನೆಲ್ಲಾ ನೀರಿನಂತೆ ಖರ್ಚು ಮಾಡುತ್ತಿರುವಾಗ ನನ್ನ ಕೃಪೆ ಇರದಿದ್ದರೆ ಹೇಗೆ? ನಾನು ಅವನ ಜೊತೆಗೆ ನಿಲ್ಲಬೇಕು, ಅವನ ಬೇಸಾಯದ ಕನಸನ್ನು ಸಾಕಾರಗೊಳಿಸಬೇಕು. ನಾನು ಸಾರ್ಥಕತೆ ಪಡೆಯಬೇಕು, ಅವನು ಧನ್ಯನಾಗಬೇಕು' ಅಂತ ಅಂದ್ಕೊಂಡ ಗಂಗಾಮಾತೆ ಅನಿಕೇತನ ಜಮೀನಿನಲ್ಲಿ ಧುಮ್ಮಿಕ್ಕಿ ಮನಸಾರೆ ನರ್ತಿಸಿ, ಸಂಭ್ರಮಿಸಿ ಅವನನ್ನೂ ಸಂಭ್ರಮಿಸುವಂತೆ ಮಾಡಿದ್ದಳು. ಅನಿಕೇತ್ ಭೂದೇವಿಗೆ, ಗಂಗಾಮಾತೆಗೆ, ಹೆತ್ತವರಿಗೆ ಸಾಷ್ಟಾಂಗ ನಮಸ್ಕಾರ ಹಾಕಿ ಧುಮ್ಮಿಕ್ಕಿ ಹರಿಯುತ್ತಿದ್ದ ಗಂಗಾಜಲವನ್ನು ಮೈಮೇಲೆ ಪ್ರೋಕ್ಷಿಸಿಕೊಂಡು ಧನ್ಯನಾಗಿದ್ದ. ಅದೇ ಖುಷಿಯಲ್ಲಿ ಅಂದು ತನಗೆ ಮಾರ್ಗದರ್ಶನ ಮಾಡಿದ ಹಿತೈಷಿಗಳಿಗೆ, ಬಂಧು ಬಾಂಧವರಿಗೆ, ಗುರುಹಿರಿಯರಿಗೆ, ಹಿಂದೆಮುಂದೆ ಆಡಿಕೊಂಡವರಿಗೆಲ್ಲರಿಗೂ ಸಿಹಿ ಹಂಚಿದ್ದ. ಮರುದಿನದಿಂದ ಕೃಷಿ ಚಟುವಟಿಕೆಗಳು ಗರಿಗೆದರಿದ್ದವು.

ಅಂದು ಇಡೀ ದಿನ ಬೆಳಿಗ್ಗೆಯಿಂದ ಸಂಜೆಯವರೆಗೆ ಅವಿರತವಾಗಿ ದಣಿವಾಗಿದ್ದರೂ ಗಂಗಾಮಾತೆ ಒಲಿದ ಖುಷಿಯಲ್ಲಿ ಅದೇಕೋ ನಿದ್ರಾದೇವಿ ಅವನ ಕಣ್ಣೆವೆಗಳನ್ನು ಅಪ್ಪಿಕೊಳ್ಳಲಿಲ್ಲ. ತಾನು ಕೃಷಿ ಕಾಯಕಕ್ಕೆ ಮುನ್ನುಗ್ಗಬೇಕೆಂದು ತೆಗೆದುಕೊಂಡಿದ್ದ ನಿರ್ಧಾರವನ್ನು ಸಂಗಾತಿ ಸಮೃದ್ಧಿಯೊಂದಿಗೆ ಹಂಚಿಕೊಂಡಾಗ ನಡೆದ ಮಾತುಕತೆಗಳ ಗುಚ್ಛ ನೆನಪಿನ ಹಂದರದಲ್ಲಿ ಸುಳಿದಾಡಿತು.

'ಹಾಯ್ ಮೈ ಸ್ವೀಟ್ ಹಾರ್ಟ್...'

'ಇದೇನು ಹೊಸ ವರಸೆ...? ಯಾವುದಕ್ಕೋ ಪೀಠಿಕೆ ಇದ್ದಂತಿದೆ...?'

'ನೀನು ಸ್ವೀಟಾಗಿಲ್ಲವೇ?'

'ಇರಲಿ, ಅದೇನು ಅಂತ ಬಾಯ್ಬಿಡೋ ಸರದಾರ.'

'ಸಮ್ಮೂ, ಕೆಲಸದಲ್ಲಿನ ಒತ್ತಡ ನಿಭಾಯಿಸಲು ಆಗುತ್ತಿಲ್ಲ ಕಣೇ.'

'ಹಾಗಿದ್ದರೆ ಬೇರೊಂದನ್ನು ಕಂಪನಿಯಲ್ಲಿ ಸೇರಿಕೊಂಡರಾಯಿತು...'

'ಎಲ್ಲಾ ಕಂಪನಿಗಳಲ್ಲೂ ಅದೇ ಹಣೆ ಬರಹ'

'ನೀನ್ಹೇಳುವುದೇನೋ ಸರಿ. ಕೆಲಸದ ಒತ್ತಡವನ್ನು ನಿಭಾಯಿಸುವುದನ್ನು ರೂಢಿಸಿಕೊಳ್ಳಬೇಕು ಅಷ್ಟೆ'

'ಸಮ್ಮೂ, ಒತ್ತಡ ನಿಭಾಯಿಸಲು ಧ್ಯಾನ ಒಂದು ಉತ್ತಮ ಸಾಧನ ಎಂದು ತಿಳಿದಿದ್ದರಿಂದ ಹತ್ತು ದಿನಗಳ ಧ್ಯಾನದ ತರಬೇತಿ ಶಿಬಿರಕ್ಕೂ ಹೋಗಿ ಬಂದೆನಲ್ಲ? ದಿನಾಲೂ ತಪ್ಪದೇ ಧ್ಯಾನವನ್ನು ಮಾಡುತ್ತಿರುವೆ. ತರಬೇತಿಗಾಗಿ ಹತ್ತು ಸಾವಿರ ದುಡ್ಡು ಸುರಿದಿದ್ದಷ್ಟೇ ನಿಜ. ಸ್ವಲ್ಪವೂ ಇಂಪ್ರೂವ್ಮೆಂಟ್ ಇಲ್ಲ.'

'ಮತ್ತೇನು ಮಾಡಬೇಕೆಂದಿರುವಿ ರಾಜಾ...?'

'ಕೆಲಸಕ್ಕೆ ರಾಜೀನಾಮೆ ಕೊಟ್ಟು...'

'ಕೆಲಸಕ್ಕೆ ರಾಜೀನಾಮೆ ಕೊಟ್ಟೇನು ಮಾಡಬೇಕಿಂದಿರುವಿ...?'

'ಊರಿಗೆ ಹೋಗಬೇಕೆಂದಿರುವೆ...'

'ಊರಿಗೆ...? ಅಲ್ಲೇನು ಮಾಡುವಿ...? ಹುಚ್ಚುಚ್ಚಾಗಿ ಮಾತಾಡುತ್ತಿರುವಿಯಲ್ಲ...?'

'ಹಳ್ಳಿಯಲ್ಲಿರುವ ನಮ್ಮ ಇಪ್ಪತ್ತು ಎಕರೆ ಜಮೀನಿನಲ್ಲಿ ಬೇಸಾಯ ಮಾಡಬೇಕೆಂದಿರುವೆ.'

'ಬೇಸಾಯ! ನೀನಾ...? ಜೋಕಾ...? ತಮಾಷೆ ಸಾಕು. ಸುಮ್ಮನೇ ಮಲಗು...'

'ಸಮ್ಮೂ, ಜೋಕಲ್ಲ. ಇದು ನನ್ನ ನಿರ್ಧಾರ...'

'ಹೌದೇ...? ನಾನು...?'

'ನೀನೂ ನನ್ನ ಜೊತೆಗೆ ಬಂದುಬಿಡು...'

'ನಿನಗೆ ಹುಚ್ಚು ಎಂದರೆ ನನಗೂ ಹುಚ್ಚಾ...?'

'ಸಮ್ಮೂ, ಎರಡು ಮೂರು ವರ್ಷಗಳಿಂದ ಕೆಲಸದಲ್ಲಿ ಒತ್ತಡ ಅತಿಯಾಗಿ ಬಿಟ್ಟಿದೆ. ನನ್ನೊಂದಿಗೆ ಹಳ್ಳಿಗೆ ಬರಲು ರೆಡಿ ತಾನೇ?'

'ಇಲ್ಲಪ್ಪ, ನಾನು ಬರೋದಿಲ್ಲ. ಹೋಗಲೇಬೇಕೆಂದು ನೀನು ಡಿಸೈಡ್ ಮಾಡಿರುವಿಯೇನು...?'

'ಹೌದು, ಹೌದು, ಹೌದು'

'ಇಲ್ಲೇನು ಕೋರ್ಟ್ ಕಲಾಪ ನಡೆಯುತ್ತಿಲ್ಲ'

'ನೀ ಬಂದರೆ ನನಗೆ ಆನೆ ಬಲ ಬಂದ ಹಾಗೆ'

'ಅದಾಗೋದಿಲ್ಲ'

'ಮತ್ತೇನು ಮಾಡುವಿ...?'

'ಇಲ್ಲೇ ಕೆಲಸ ಮುಂದುವರಿಸುವೆ'

'ಡಿವೋರ್ಸ್ ಗಿವೋರ್ಸ್ ಬೇಕಾ...?' ತಮಾಷೆಗೆ ಮುಂದಾಗಿದ್ದ ಅನಿಕೇತ್.

'ಥೂ ಗೂಬೆ! ನಾನು ಹುಟ್ಟಿದ್ದೇ ನಿನ್ನ ಪ್ರೀತಿಯನ್ನು ಕದಿಯೋದಿಕ್ಕೆ. ಇತಿಹಾಸದಲ್ಲಿ ಹೆಣ್ಣಿಗೆ ಧರ್ಮವನ್ನು ಬೋಧಿಸಿದ ಅಭ್ಯಾಸ ಗಂಡಿಗೆ. ಹೆಣ್ಣನವೇ ಒಂದು ದೊಡ್ಡ ಧರ್ಮವಾಗಿರುವಾಗ ಧರ್ಮಕ್ಕೆ ಧರ್ಮದ ಬೋಧೆ ಅಗತ್ಯವಿದೆಯೇ? ನಾನು ಅಪ್ಪಟ ಭಾರತೀಯ ನಾರಿ ಕಣೋ. ನಮ್ಮಿಬ್ಬರ ಭಾವಗಳನ್ನು, ಅನುಬಂಧವನ್ನು ಬಣ್ಣಿಸಲು ಸಾಧ್ಯವಿಲ್ಲ. ನನ್ನೊಲುಮೆಯ ಜೀವದ ಚೆಲುಮೆಯಂತಿರುವ ಹುಡುಗನ ಎದೆಯೊಳಗಿಂದ ಇಂಥ ಮಾತುಗಳೇ?'

'ಸಮ್ಮೂ, ಗೋಳು ಹೊಯ್ದುಕೊಳ್ಳಲು ಹಾಗೆ ಹೇಳಿದೆ. ಬಿ ಕೂಲ್. ನಾವು ಪ್ರೀತಿಸುತ್ತಿದ್ದಾಗಲೇ ಹಳ್ಳಿಗೆ ಹೋಗಿ ಬೇಸಾಯ ಮಾಡಬೇಕೆಂದಿರುವ ನನ್ನ ಮನದ ಬಯಕೆ, ಹಂಬಲದ ಬಗ್ಗೆ ತಿಳಿಸಿರಲಿಲ್ಲವೇ...? ಕೆಲಸದ ಒತ್ತಡ, ಸಿಲಿಕಾನ್ ಸಿಟಿಯ ಕಾಂಕ್ರೀಟ್ ಕಟ್ಟಡಗಳು, ಟ್ರಾಫಿಕ್ ಜಾಮ್‌ಗೆ ಅಂಜಿಕೊಂಡಿರುವೆ. ನಮ್ಮ ಯೌವನ ಈ ಟ್ರಾಫಿಕ್ ಜಾಮಲ್ಲೇ ಕಳೆದು ಹೋಗುತ್ತಿದೆ. ಬಟ್ಟೆಗಳನ್ನು ಬದಲಿಸಿದಂತೆ ಸಂಗಾತಿಗಳನ್ನು ಬದಲಾಯಿಸೋದು ಈಗಿನ ಕಾಲದಲ್ಲಿ ಸಾಮಾನ್ಯ. ಮಧ್ಯಾಹ್ನ ಮದುವೆ, ಸಂಜೆ ಹನಿಮೂನ್, ಮರುದಿನ ಡೈವೋರ್ಸ್‌ಗಳೂ ಆಗುತ್ತಿವೆಯಲ್ಲ...? ಅದಕ್ಕೇ ಹಾಗೆ ಹೇಳಿದೆ. ತಪ್ಪಾಗಿ ಭಾವಿಸಬೇಡ.'

'ಲೋ ಹಳ್ಳಿಗುಗ್ಗು, ನಿನ್ನ ಬಿಟ್ಟು ಅರೆಕ್ಷಣವಾದರೂ ನನ್ನಿಂದ ಇರಲು ಸಾಧ್ಯವೇ? ಐದು ವರ್ಷಗಳವರೆಗೆ ಜೊತೆಯಾಗಿ ಜೀವನ ಮಾಡಿ, ದಾಂಪತ್ಯದ ಸವಿಜೇನು ಸವಿದು ಈಗ ಒಮ್ಮಿಂದೊಮ್ಮಲೇ ಕೆಲಸಕ್ಕೆ ರಾಜೀನಾಮೆ ಕೊಟ್ಟು ಹಳ್ಳಿಗೋಗಿ ಹೊಲದಲ್ಲಿ ಗೇಯ್ತೀನಿ, ಸಗಣಿ ಬಾಚ್ತೀನಿ ಅಂದ್ರೆ...?'

'ಸಂಡೇ ಗಂಡನಾಗಲು ವಾರಕ್ಕೊಂದು ಸಾರಿ ತಪ್ಪದೇ ಬರುವೆ. ಓಕೇನಾ? ಮೊಬೈಲ್‌ಗಳಂತೂ ಇದ್ದೇ ಇವೆ. ಸದ್ಯ ಹಳ್ಳಿಗೆ ಬರಲು ಮನಸ್ಸಿಲ್ಲದಿದ್ದರೂ ಒಂದು ವರ್ಷಗಾಗುವಷ್ಟರಲ್ಲಿ ನೀನು ಬಂದೇ ಬರುವಿ ಎಂದು ನನ್ನ ಅಂತರಾತ್ಮ ಹೇಳುತ್ತಿದೆ'

'ನಮ್ಮದೆಷ್ಟಾದರೂ ಪುರುಷ ಪ್ರಧಾನ ಸಮಾಜ ಅಲ್ಲವೇ...?'

'ಇನ್ನೂ ನಿನ್ನ ಚೇಷ್ಟೆ ನಿಲ್ಲಲಿಲ್ಲವೇ?' ಎಂದೆನ್ನುತ್ತಾ ಅನಿಕೇತ್ ಸಮೃದ್ಧಿಯನ್ನು ಬಿಗಿದಪ್ಪಿ ಮುತ್ತಿನ ಮಳೆಗರೆದಿದ್ದ. ಅವಳು ಅರಳಿದ ಹೂವಿನಂತಾಗಿದ್ದಳು. ಅವನು ದುಂಬಿಯಂತಾಗಿದ್ದ. ಮಧುವಿನ ನಶೆಯಲ್ಲಿ ಮಿಂದು ಮೀಯ್ದಿದ್ದರು.

ಅಂದಿನ ಮಾತುಕತೆಗಳು, ತುಂಟಾಟಗಳನ್ನು ನೆನಪಿಸಿಕೊಂಡು ಅನಿಕೇತ್ ಮನದಲ್ಲೇ ನಕ್ಕ. ಮನಸ್ಸು ಮುದಗೊಂಡಿತ್ತು. ಅದೇನೋ ಒಂಥರ ಅನಿರ್ವಚನೀಯ ಆನಂದ. ಸಮೃದ್ಧಿಯೊಂದಿಗೆ ಮಾತಾಡಬೇಕೆನ್ನಿಸಿತು. ಮೊಬೈಲ್ ತೆಗೆದ. ಸಮಯ ಆಗಲೇ ರಾತ್ರಿ ಹನ್ನೊಂದು ಗಂಟೆ. ಈ ಹೊತ್ತಿನಲ್ಲಿ ಅವಳನ್ನು ಡಿಸ್ಟರ್ಬ್ ಮಾಡಲೇ ಹೇಗೆ ಎಂಬ ಅನುಮಾನದ ಮಿಂಚೊಂದು ಸುಳಿದು ಹೋಯಿತು ಮನದಲ್ಲಿ. ಆದರೂ ಡಯಲ್ ಮಾಡೇ ಬಿಟ್ಟ.

'ಈ ಹೊತ್ತಿನಲ್ಲಿ ಅದೇನೋ ನಿನ್ನ ಕಾಟ? ಕೂಸಿಗೆ ನಿದ್ರೆ ಬರುತ್ತಿಲ್ಲವೇ? ಇಲ್ಲಿಂದಲೇ ಜೋಗುಳ ಹಾಡಲೇ?' ನಿದ್ದೆಗಣ್ಣಿನಲ್ಲಿ ಉಸುರಿದ್ದಳು ಸಮೃದ್ಧಿ ಜೇನದನಿಯಲ್ಲಿ.

'ಹೌದು ತಾಯಿ ಈ ಮಗುವಿಗೆ ಜೋಗುಳದ ಹಾಡು ಬೇಕಿದೆ' ತುಂಬಾ ವಿನೀತನಾಗಿ ಹೇಳಿದ ಅನಿಕೇತ್.

'ಅಲ್ಲಿ ನಿನ್ನ ಹಡೆದವ್ವನೇ ಇದ್ದಾಳಲ್ಲೋ?'